ಇದರಿಂದ ರಿಕ್ತ ಸ್ಥಾನಗಳ ಖಾಲಿ ಹುದ್ದೆಗಳ ಎದುರು ಬಡ್ತಿ ಹುದ್ದೆಗಳನ್ನು ತುಂಬಿರುವ ಕಾರಣಕ್ಕಾಗಿ ರಿಕ್ತ ಸ್ಥಾನಗಳಲ್ಲಿ ವ್ಯತ್ಯಾಸ ಉಂಟಾಗಿದೆ. ಸರ್ಕಾರದ ಸುತ್ತೋಲೆ ಸಂಖ್ಯೆ ಸಿಆಸುಇ 78 ಸೆನಿಇ 2002 ದಿನಾಂಕ 30.8.2002ರಲ್ಲಿ ರಿಕ್ತ ಸ್ಥಾನಗಳನ್ನು ನೇರ ನೇಮಕದಿಂದಲೇ ತುಂಬಬೇಕೆಂದು ಆದೇಶವಿದೆ. ಆದ್ದರಿಂದ ಬಡ್ತಿ ನೀಡಿರುವುದಿಲ್ಲ.

ಅ) ಸರ್ಕಾರಿ ಸುತ್ತೋಲೆ ಸಂಖ್ಯೆ: ಸಿಆಸುಇ 78 ಸೆನಿಇ 2002 ದಿನಾಂಕ 30.8.02ರ ಪ್ರಕಾರ ರಿಕ್ತ ಸ್ಥಾನಗಳನ್ನು ನೇರ ನೇಮಕಾತಿಯಿಂದಲೇ ತುಂಬಬೇಕೆಂಬ ಆದೇಶವಿರುವುದರಿಂದ ಮುಂದಿನ ಕ್ರಮ ಕೈಗೊಳ್ಳಲು ಬರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಸಹಾಯಕ ಕೃಷಿ ಅಧಿಕಾರಿಗಳ ನೇಮಕ

1677 (1763) ಶ್ರೀ ಕೃಷ್ಣಪ್ಪ ವಿ. (ದೊಡ್ಡಬಳ್ಳಾಪುರ) - ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೃಷಿ ಇಲಾಖೆಯಲ್ಲಿರುವ ಸಹಾಯಕ ಕೃಷಿ ಅಧಿಕಾರಿಗಳ ಸಂಖ್ಯೆ ಎಷ್ಟು ; ಇದರಲ್ಲಿ ಭರ್ತಿಯಾಗಿರುವ ಹಾಗೂ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ;

ಆ) ಈ ಹುದ್ದೆಗಳ ನೇಮಕಾತಿಗಾಗಿ ಜಾಹೀರಾತು ನೀಡಿದ್ದರೂ ಈವರೆಗೂ ನೇಮಕಾತಿ ಮಾಡಿಕೊಳ್ಳದೇ ಇರಲು ಕಾರಣಗಳೇನು ;

ಇ) ಈ ಹುದ್ದೆಗಳಿಗೆ ಯಾವಾಗ ನೇಮಕ ಮಾಡಿಕೊಳ್ಳಲಾಗುವುದು ?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು):

ಅ) 1074 ಇದರಲ್ಲಿ ಎಲ್ಲಾ ಹುದ್ದೆಗಳು ಭರ್ತಿ ಇದ್ದು, ಯಾವುದೇ ಹುದ್ದೆ ಖಾಲಿ ಇರುವುದಿಲ್ಲ.

ಆ) ಹುದ್ದೆಗಳು ಖಾಲಿ ಇಲ್ಲದೆ ಇರುವುದರಿಂದ ಜಾಹಿರಾತು ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಎಲ್ಲ ಸಹಕಾರಿ ಬ್ಯಾಂಕುಗಳಲ್ಲಿ ಬಲವಂತವಾಗಿ ಸಾಲ ವಸೂಲಾತಿ

1678 (2258) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) - ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಬರಗಾಲ ಬಂದಿರುವ ಸಮಯದಲ್ಲಿ ಎಲ್ಲಾ ಸಹಕಾರಿ ಬ್ಯಾಂಕ್‌ಗಳಲ್ಲಿ ಬಲವಂತವಾಗಿ ಸಾಲ ವಸೂಲಾತಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಒಂದು ವರ್ಷಗಳ ಕಾಲ ವಸೂಲಿ ಮಾಡಬಾರದೆಂದು ಸರ್ಕಾರ ಹೇಳಿಕೆ ನೀಡಿರುವುದು ನಿಜವೇ ;

ಇ) ಹಾಗಿದ್ದಲ್ಲಿ, ತಕ್ಷಣ ಎಲ್ಲಾ ಬ್ಯಾಂಕ್‌ಗಳಿಗೆ ಆದೇಶ ನೀಡಿ ವಸೂಲಾತಿ ಕಾರ್ಯಕ್ರಮ ನಿಲ್ಲಿಸಲಾಗುವುದೇ ;

ಈ) ಕೆಲವು ಕಡೆ ಜಪ್ತಿ ಮಾಡುತ್ತಿರುವುದು ನಿಜವೇ ; ಯಾವಾಗ ನಿಲ್ಲಿಸಲಾಗುವುದು ?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು):

ಅ) ಬಲವಂತವಾಗಿ ಸಾಲ ವಸೂಲಿ ಮಾಡಿದ ನಿರ್ದಿಷ್ಟ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಅ) ಇಲ್ಲ

ಇ) ಇಲ್ಲ

ಈ) ಉದ್ದೇಶಪೂರಿತ ಪ್ರತಿಷ್ಠಿತ ಹಾಗೂ ಸಾಲ ಮರುಪಾವತಿ ಮಾಡಲು ಶಕ್ತಿಯುಳ್ಳ ಸುಸ್ತಿಗಾರರಿಂದ ವಸೂಲು ಮಾಡಲು ಜಪ್ತಿ ಮಾಡಲಾಗುತ್ತದೆ.

ರಾಜ್ಯದಲ್ಲಿ ಅಂಗನವಾಡಿ ನೌಕರರ ಭತ್ಯೆ ಹೆಚ್ಚಳ

1679 (2259) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) - ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಾದ್ಯಾಂತ ಅಂಗನವಾಡಿ ನೌಕರರು ಇತ್ತೀಚಿಗೆ ಸಂಬಳ ಹೆಚ್ಚಿಗೆ ಕೋರಿ ಸತ್ಯಾಗ್ರಹ ಮಾಡಿರುವುದು ನಿಜವೇ ;

ಆ) ಹಾಗಿದ್ದಲ್ಲಿ ಸರ್ಕಾರ ತೆಗೆದುಕೊಂಡಿರುವ ನಿಲುವೇನು ;

ಇ) ಯಾವಾಗ ಸಂಬಳ ಹೆಚ್ಚಿಗೆ ಮಾಡಲಾಗುವುದು ;

ಈ) ಈ ಆಯವ್ಯಯದಲ್ಲಿ ಮಾಡಲಾಗುತ್ತದೆಯೇ ?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):

ಅ) ನಿಜ

ಆ) ಕೇಂದ್ರ ಸರ್ಕಾರದಿಂದ ಗೌರವಧನವನ್ನು ಈಗಾಗಲೇ ಹೆಚ್ಚಿಸಲಾಗಿದೆ.

ಇ) ಕೇಂದ್ರ ಸರ್ಕಾರದಿಂದ ದಿನಾಂಕ: 16.1.03 ರಂದು ಆದೇಶ ಹೊರಡಿಸಿದ್ದು ಜರೂರಾಗಿ ಬಿಡುಗಡೆಗೊಳಿಸಲಾಗುವುದು.

ಈ) ಉದ್ಭವಿಸುವುದಿಲ್ಲ.

ಸೌಹಾರ್ದ ಸಹಕಾರಿಗಳಿಗೆ ನೋಂದಣಿ ಪೂರ್ವದ ಷರತ್ತುಗಳು

1680 (2260) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) - ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ಉತ್ತರಿಸುವರೆ?

ಅ) ಸೌಹಾರ್ದ ಸಹಕಾರಿಗಳಿಗೆ ನೋಂದಣಿ ಪೂರ್ವದಲ್ಲಿ ಸದಸ್ಯರನ್ನು ಹಾಗೂ ಷೇರು ಹಣ ಸಂಗ್ರಹಿಸುವ ಬಗ್ಗೆ ಪೂರ್ವ ಷರತ್ತನ್ನು ವಿಧಿಸುತ್ತಿರುವ ವಿಚಾರ ನಿಜವೇ ; ಈ ರೀತಿಯ ಕ್ರಮವೇಕೆ ;

ಆ) ಈಗಾಗಲೇ ಸದರಿ ನಿರ್ಬಂಧಕರು ಪತ್ತಿನ ಸೌಹಾರ್ದ ಸಹಕಾರಿಗಳಿಗೆ ಈ ಪೂರ್ವ ಷರತ್ತನ್ನು ವಿಧಿಸಿರುವರೇ ;

ಇ) ಹೌದಾದಲ್ಲಿ ಪೂರ್ವ ಷರತ್ತು ವಿಧಿಸಿರುವ ಅಧಿಕಾರವು ಕಾಯಿದೆಯ ನಿಯಮಗಳಿಗೆ ವಿರುದ್ಧವಲ್ಲವೇ? ಈ ಸಂದರ್ಭಗಳಲ್ಲಿ ಇದಕ್ಕಾಗಿ ಕೈಗೊಂಡ ಕ್ರಮಗಳೇನು ;

ಈ) ನಿಬಂಧಕರ ಈ ನಿರ್ಧಾರಕ್ಕೆ ಸರ್ಕಾರದ ನಿಲುವೇನು ?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು):

ಅ) ಹೌದು. ಪತ್ತಿನ ಸಹಕಾರಿಗಳಿಗೆ ಮಾತ್ರ ಈ ಷರತ್ತನ್ನು ವಿಧಿಸಲಾಗುತ್ತಿದ್ದು, ಸಾಲ ನೀಡುವ ಉದ್ದೇಶ ಹೊಂದಿರುವ ಸಹಕಾರಿಗಳಿಗೆ ಬಂಡವಾಳ ಹಾಗೂ ಸದಸ್ಯರ ಸಂಖ್ಯೆ ಪ್ರಮುಖವಾಗಿರುತ್ತದೆ. ಸೌಹಾರ್ದ ಸಹಕಾರಿಗಳು ಆರ್ಥಿಕ ಉದ್ಯಮಗಳಾಗಿದ್ದು, ಆರ್ಥಿಕ ಸಬಲತೆ